# ಮುರುಘಾ ಮಠ : ಶರಣ ಸಂಗಮ ಸುದ್ದಿ

ಚಿತ್ರದುರ್ಗ ಆ.6 - ಧರ್ಮ ಆಚರಿಸುವುದರ ಬದಲು ಸಂಪ್ರದಾಯ ಆಚರಿಸುತ್ತ ಬರಲಾಗಿದೆ. ಸಂಪ್ರದಾಯ ಧರ್ಮ ಆಗಲು ಸಾಧ್ಯವಿಲ್ಲ. ಧರ್ಮ ಬೇರೆ, ಮೂಢನಂಬಿಕೆಗಳೇ ಬೇರೆ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ನಗರದ ಶ್ರೀ ಮುರುಘಾಮಠದಲ್ಲಿ ಎಸ್.ಜೆ.ಎಂ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಹಯೋಗದಲ್ಲಿ ನಡೆದ ಶರಣ ಸಂಗಮದ ಅಧ್ಯಕ್ಷತೆ ವಹಿಸಿ ಶ್ರೀಗಳು ಮಾತನಾಡಿದರು.

ಜೀವನದಲ್ಲಿ ಹವ್ಯಾಸ ಇರಬೇಕು. ದುರಭ್ಯಾಸ ಇರಬಾರದು. ಯಾವುದೇ ವ್ಯಸನಗಳಿಗೆ ಒಳಗಾಗಬಾರದು. ಮೌಢ್ಯದ ದಾಸರಾಗಬಾರದು. ಮಾನವನ ಜ್ಞಾನವನ್ನು ಹೆಚ್ಚಿಸುವಲ್ಲಿ ಶರಣ ಸಂಕುಲ ಬೇಕಿದೆ. ಶರಣ ಸಂಕುಲ ಸುಮ್ಮನೆ ದೊರಕುವುದಿಲ್ಲ. ಅದು ಸಾಧನೆ ಮೂಲಕ ಕಾಣಬಹುದು. 770 ಅಮರ ಗಣಂಗಳು ಶರಣ ಸಂಕುಲವನ್ನು ಸೇರಿದ್ದರು. ಇದು ಜೀವನದ ದೊಡ್ಡತನ. ದುಷ್ಟರ ಸಂಗದಲ್ಲಿ ದುಷ್ಟತನ ಇದೆ. ಶರಣರ ಸಂಗದಲ್ಲಿ ದೊಡ್ಡತನ ಇದೆ. ಶರಣಸಂಗಮದಲ್ಲಿ ಜ್ಞಾನದ ಅನಾವರಣ ಆಗುತ್ತದೆ. ಪುಸ್ತಕ, ಪೆನ್ನು, ನೋಟ್‌ಬುಕ್ ಇವು ನಿಜವಾದ ಆಸ್ತಿ. ಜ್ಞಾನದ ಸಂಪತ್ತನ್ನು ನೀಡುವ ಪುಸ್ತಕಗಳು ನಮ್ಮನ್ನು ರಕ್ಷಿಸುತ್ತವೆ. ನಾವು ಪುಸ್ತಕದ ಜೊತೆ ಸಾಗಬೇಕು. ಅದರಿಂದ ಮಸ್ತಕ ಅರಳುತ್ತದೆ ಎಂದು ತಿಳಿಸಿದರು.

ಮುಖ್ಯಅತಿಥಿ ಡಾ ಜೆ. ಕರಿಯಪ್ಪ ಮಾಳಿಗೆ ಅವರು ಮೌಢ್ಯಮುಕ್ತ ಸಮಾಜ ಕೈಗೂಡುವುದೇ? ವಿಷಯ ಕುರಿತು ಮಾತನಾಡುತ್ತ, ನಾವು ಇಂದಿಗೂ ಸಹ ಮೌಢ್ಯಗಳಿಂದ ಹೊರಬರಲು ಸಾಧ್ಯವಾಗುತ್ತಿಲ್ಲ. ಜನಪದರು ನಂಬಿಕೆಗಳನ್ನು ಹುಟ್ಟು ಹಾಕಿದರು. ಆದರೆ ಅವರು ಮೂಢನಂಬಿಕೆಗಳನ್ನು ಹುಟ್ಟು ಹಾಕಲಿಲ್ಲ. ನಂಬಿಕೆಗಳು ಮೂಲ ಅಸ್ತಿತ್ವವನ್ನು ಕಳೆದುಕೊಂಡು ಮೂಢನಂಬಿಕೆಗಳಾಗಿವೆ. ಕಾರಣ ಅರಿವಿನ ಕೊರತೆ. ಅಂಥ ಜನರಲ್ಲಿ ಅರಿವಿನ ತಿಳುವಳಿಕೆಗಳನ್ನು ಬಿತ್ತಬೇಕಿದೆ ಎಂದರು.

ಬುದ್ಧ, ಅಲ್ಲಮ ಬಗ್ಗೆ, ದಾಸರು, ಬಸವಣ್ಣನವರು ಹಾಗು ವಿವೇಕಾನಂದರ ಅರಿವಿನ ಜ್ಞಾನವನ್ನು ಜನರಲ್ಲಿ ಬಿತ್ತಬೇಕಿದೆ. ಶ್ರಾವಣಮಾಸದಲ್ಲಿ ಅನೇಕ ಹಬ್ಬಗಳು ಬಂದುಹೋಗುತ್ತವೆ. ಆ ಹಬ್ಬಗಳನ್ನು ಆಚರಿಸಬೇಕೆ ಬೇಡವೇ ಎನ್ನುವುದು ನಮ್ಮ ಧಾರ್ಮಿಕ ಶ್ರದ್ಧೆ. ಅದು ಮೂಢನಂಬಿಕೆ ಅಲ್ಲ. ಅಂಧಶ್ರದ್ಧೆ ಇರಬಾರದು. ಮಾಟ, ಮಂತ್ರ, ಉಂಡ ಎಲೆ ಮೇಲೆ ಹೊರಳಾಡುವುದು ಇವು ಮೌಢ್ಯಗಳು. ಅಂಧಶ್ರದ್ಧೆಗಳು ನಮ್ಮಲ್ಲಿ ಬರುವುದೇ ಅಜ್ಞಾನದಿಂದ ಎಂದು ತಿಳಿಸಿದರು.

ಶರಣರು ನಡೆದಂತೆ ನುಡಿದರು. ನಾವು ಮಗುವನ್ನು ಅಜ್ಞಾನದ ತೊಟ್ಟಿಲೊಳಗೆ ಬೆಳೆಸಿದೆವು. ಆ ಅಜ್ಞಾನದ ತೊಟ್ಟಿಲಿಂದ ಹೊರಬರಲು ಆ ತೊಟ್ಟಿಲ ಹಗ್ಗ ಹರಿದು ಹೊರಬರಬರಬೇಕು. ಅದು ಶರಣರ ಸಂಗಮದಲ್ಲಿದೆ. ಮೌಢ್ಯ ಹೋಗಲಾಡಿಸಲು ತನ್ನನ್ನು ತಾನು ಅರಿತುಕೊಳ್ಳಬೇಕು. ಯಾವುದೇ ಕಾನೂನು ಏನೂ ಮಾಡುವುದಿಲ್ಲ. ನಮ್ಮ ಅಂತರಂಗ, ವ್ಯಕ್ತಿತ್ವದಲ್ಲಿ ಬದಲಾಗಬೇಕು. ನಾಲಗೆ ಚೆನ್ನಾಗಿದ್ದರೆ ನಾಡೆಲ್ಲ ಚೆಂದ ಎನ್ನುವ ಹಾಗೆ ನಮ್ಮನ್ನು ಅರಿತುಕೊಂಡರೆ ಎಲ್ಲದೂ ಸಾಧ್ಯವಾಗುತ್ತದೆ. ನಾವು ವಿಶ್ವ ಮಾನವರಾಗಬೇಕು ಎಂದರೆ ನಮ್ಮೊಳಗೆ ಅರಿವು ಜಾಗೃತವಾಗಬೇಕು. ಅಮಾವಾಸ್ಯೆ ದಿನ ಶ್ರೀಮಠದಲ್ಲಿ ಕಲ್ಯಾಣಗಳು ನಡೆದಿವೆ. ಅಮಾವಾಸ್ಯೆ ಒಳಗೆ ಕುಳಿತುಕೊಂಡು ತತ್ವಪದಕಾರರು ತತ್ವಪದಗಳನ್ನು ರಚಿಸಿದರು ಎಂದು ಹೇಳಿದರು.

ಮತ್ತೋರ್ವ ಅತಿಥಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವಿದ್ಯಾಧಿಕಾರಿ ಎನ್.ಆರ್. ತಿಪ್ಪೇಸ್ವಾಮಿ ಮಾತನಾಡಿ, ಶ್ರೀ ಮುರುಘಾಮಠವು ಸಮಾಜದಲ್ಲಿ ವೈಚಾರಿಕ ಪ್ರಜ್ಞೆಯನ್ನು ಬಿತ್ತುತ್ತ ಬಂದಿದೆ. ಮನುಷ್ಯ ಪುಣ್ಯದ ಕೆಲಸ ಮಾಡಬೇಕು. ಬೇರೊಬ್ಬರಿಗೆ ತೊಂದರೆ ಕೊಡದೆ ಬದುಕಬೇಕು. ಇನ್ನೊಬ್ಬರ ಬಗ್ಗೆ ಕರುಣೆ, ಅನುಕಂಪವನ್ನು ತೋರಿಸಬೇಕೆಂದರು.

ಜಮುರಾ ಕಲಾವಿದರು ಪ್ರಾರ್ಥಿಸಿದರು. ಪ್ರಾಚಾರ್ಯರಾದ ಡಾ. ಪಂಚಾಕ್ಷರಿ ಸ್ವಾಗತಿಸಿದರು. ಸಂತೋಷ್ ನಿರೂಪಿಸಿದರು.


ಶರಣ ಸಂಗಮ
ಚಿಂತನ ವಿಷಯ : ಮೌಢ್ಯಮುಕ್ತ ಸಮಾಜ ಕೈಗೂಡುವುದೆ?
ದಿನಾಂಕ : 05-08-2022 ಶುಕ್ರವಾರ ಸಮಯ : ಸಂಜೆ 6.30 ಸ್ಥಳ : ಅನುಭವ ಮಂಟಪ
ಡಾ. ಶಿವಮೂರ್ತಿ ಮುರುಘಾ ಶರಣರು

